ಅವಳಿಗೆ ಹೊಟ್ಟೆ ಹಸಿವಿನಿಂದಾಗಿ ನಿದ್ದೆ ಬರಲಿಲ್ಲ. ಕೆಲವು ದಿವಸಗಳ ಹಿಂದೆ ಅವರ ಬೀದಿಗೆ ಕಾರ್ಪೊರೇಟರ್ ಬಂದಿದ್ದ. ಅವನು ಬಂದು ಹೋದ ಮರುದಿನವೇ ಎಂಎಲ್ಎ ವಕ್ಕರಿಸಿದ್ದ. ಆಗ ಪಕ್ಕದ ಮನೆಯ ಬೂಬಮ್ಮನ ಸೊಸೆ ಬಿ.ಎ. ವರೆಗೆ ಕಲಿತವಳು ಹೇಳಿದ್ದಳು. ಈ ಕಾರ್ಪೊರೇಟರು ಮತ್ತು ಎಂಎಲ್ಎ ಒಂದೇ ಪಕ್ಷದವರು. ನಮ್ಮವರೇ, ಆದರೆ ಹಾವು ಮುಂಗುಸಿಯ ಹಾಗೆ ಕಿತ್ತಾಡ್ತಾರೆ. ಕಾರ್ಪೊರೇಟರು ಮುಂದಿನ ಸಲ ಎಂಎಲ್ಎ ಸೀಟಿಗೆ ಯತ್ನಿಸುತ್ತಾನಂತೆ. ಅದಕ್ಕೆ ಅವರ ನಡುವೆ ಶರಂಪರ ಜಗಳವಂತೆ.

ಆದರೆ, ಅವರಿಬ್ಬರೂ ಒಂದೇ ವಿಷಯದ ಬಗ್ಗೆ ಮಾತಾಡಿದ್ದರು. ಪೌರತ್ವ ತಿದ್ದುಪಡಿ ಕಾಯಿದೆ ಮಾಡಿ ನಮ್ಮವರನ್ನೆಲ್ಲಾ ಈ ದೇಶದ ಪೌರತ್ವದಿಂದ ಕಿತ್ತು ಹಾಕಿ ಪಾಕಿಸ್ತಾನಕ್ಕೆ ಓಡಿಸ್ತಾರಂತೆ. ಪಾಕಿಸ್ತಾನದವರು ಈ ದೇಶದ ಯಾರ ತಲೆಕಂಡರೂ ಉರಿದು ಬೀಳುತ್ತಾರಂತೆ. ಅವರು ಆರಾಧನಾ ಕೇಂದ್ರಗಳಲ್ಲೇ ಬಾಂಬು ಸ್ಫೋಟ ಮಾಡುವ ಸೈತಾನುಗಳು. ಅಲ್ಲಿಗೆ ನಾವು ಹೋದರೂ ಬೀದಿಯಲ್ಲಿ ಭಿಕ್ಷೆ ಬೇಡಬೇಕು. ಹಾಗೆ ಭಿಕ್ಷೆ ಬೇಡುವವರನ್ನು ಜೈಲಿಗೆ ತಳ್ಳಿ, ನೀರು, ಆಹಾರ ಕೊಡದೆ ನರಳಿ ನರಳಿ ಸಾಯುವಂತೆ ಮಾಡುತ್ತಾರಂತೆ.

ಆ ಮಾತಿಗೆ ಅವಳು ಗದಗುಟ್ಟಿ ನಡುಗಿದ್ದಳು. ಕಾಣದ ಊರಲ್ಲಿ ನೀರಿಲ್ಲದೆ ಸಾಯುವ ಯೋಗವಾಯಿತಲ್ಲಾ ತಮ್ಮವರದು ಎಂದು ಚಿಂತೆಯಲ್ಲಿ ಮುಳುಗಿದ್ದಳು. ಯಾರ ತಂಟೆಗೂ ಹೋಗದೆ ಹೂ ಮಾರಿ ಹಣ ತರುತ್ತಿದ್ದ ಗಂಡ ಎರಡು ಸಲ ನಮಾಜು ಮಾಡುತ್ತಿದ್ದ. ಮನೆಯಲ್ಲಿರುವ ಅವಳು ಐದು ಸಲ ನಮಾಜು ಮಾಡಿ ಹಗುರಾಗುತ್ತಿದ್ದಳು. ಆದರೆ, ಸೈತಾನನ ಆಟವೇ ಜೋರಾಗುತ್ತಿದೆ. ಇಲ್ಲದಿದ್ದರೆ ತಮ್ಮನ್ನು ಯಾಕೆ ಪಾಕಿಸ್ತಾನಕ್ಕೆ ಓಡಿಸಬೇಕು? ಅವಳಿಗೆ ಉತ್ತರ ಸಿಗದೆ ಗಂಡನನ್ನು ಕೇಳಿದಾಗ ಓಡಿಸುವುದು ನಮ್ಮನ್ನಲ್ಲವಂತೆ. ಪಾಕಿಸ್ತಾನ, ಅಫ್ಘಾನಿಸ್ಥಾನ ಮತ್ತು ಬಾಂಗ್ಲಾದೇಶದವರನ್ನಂತೆ. ಅವರಿಗೆ ಅವರ ದೇಶ ಇರುವಾಗ ನಮ್ಮ ದೇಶಕ್ಕೆ ಯಾಕೆ ಬರಬೇಕು? ಸೈತಾನನ ಮಕ್ಕಳು! ತಾವೂ ಸುಖವಾಗಿಲ್ಲ. ನಮ್ಮನ್ನೂ ಸುಖವಾಗಿ ಬದುಕಲು ಬಿಡುತ್ತಿಲ್ಲ ಎಂದಿದ್ದ. ಯಾವುದು ಸತ್ಯ, ಯಾವುದು ಸುಳ್ಳು ಎಂದರಿಯದೆ ಅವಳು ತೊಳಲಿದ್ದಳು.

ನಿನ್ನೆ ಸಂಜೆಯ ಘಟನೆ ಅವಳಿಗೆ ನೆನಪಾಯಿತು. ಅವಳ ಮನೆಯಿಂದ ಫರ್ಲಾಂಗು ದೂರದಲ್ಲಿ ಸರಕಾರೀ ಅಧಿಕಾರಿಗಳು ಬಂದು ಶಾಮಿಯಾನ ಹಾಕಿದರು. ಮೇಜು, ಕುರ್ಚಿ ಜೋಡಿಸಿಟ್ಟರು. ಕೋವಿಡ್–19 ಪರೀಕ್ಷೆ ಎಂದು ಒಂದು ಬ್ಯಾನರ್ ಹಾಕಿದರು. ಸಹಾಯಕರನ್ನು ಮನೆ ಮನೆಗೆ ಕಳುಹಿಸಿದರು. ಕೋವಿಡ್ ಮಹಾಮಾರಿ. ಅದು ನಿಮ್ಮನ್ನು ಸೋಂಕಿದರೆ ಅದಕ್ಕೆ ಮದ್ದಿಲ್ಲ. ಬನ್ನಿ ಪರೀಕ್ಷೆ ಮಾಡಿಸಿಕೊಳ್ಳಿ. ನಿಮ್ಮ ಮಕ್ಕಳು ಮರಿಗಳಿಗೆ ಅದು ಅಂಟದಂತೆ ನೋಡಿಕೊಳ್ಳಿ ಎಂದು ಅವರು ಮನೆ ಮನೆಗಳಲ್ಲಿ ಹೇಳಿದರು. ಇನ್ನೇನು ಬುರ್ಖಾಧಾರಿಣಿಯರು ಪರೀಕ್ಷೆಗೆ ಹೊರಡಬೇಕು ಎಂದಾಗ ಕಾರ್ಪೊರೇಟರು ದೊಡ್ಡ ಗ್ಯಾಂಗು ಕಟ್ಟಿಕೊಂಡು ಬಂದ. ಅದು ಕೋವಿಡ್ ಪರೀಕ್ಷೆಯಲ್ಲ. ಅವರು ಪೌರತ್ವ ತಿದ್ದುಪಡಿ ಕಾಯಿದೆಯನ್ನು ಜಾರಿಗೊಳಿಸಲು ಬಂದವರು. ನಿಮ್ಮ ವಿವರ ಪಡೆದು ಹಂತ ಹಂತವಾಗಿ ಪಾಕಿಸ್ತಾನಕ್ಕೆ ಕಳಿಸುತ್ತಾರೆ. ಪಾಕಿಸ್ತಾನದ ನಮಕ್ ಹರಾಮಿಗಳು ನಿಮ್ಮನ್ನು ಗನ್ನುಗಳಲ್ಲಿ ಸುಟ್ಟು ಹಾಕುತ್ತಾರೆ. ಪರೀಕ್ಷೆಗೆ ಹೋಗಬೇಡಿ.

ಹಾಗೆ ಹೇಳಿದ ಕಾರ್ಪೊರೇಟರಿನ ಕಡೆಯವರು ಶಾಮಿಯಾನಕ್ಕೆ ಬೆಂಕಿ ಇಟ್ಟರು. ಕುರ್ಚಿ ಮೇಜುಗಳನ್ನು ನೆಲಕ್ಕೆಸೆದು ಹುಡಿ ಮಾಡಿದರು. ವಾಹನಗಳ ಗಾಜುಗಳನ್ನು ಒಡೆದು ಹಾಕಿದರು. ಅಧಿಕಾರಿಗಳನ್ನು ಹಿಡಿದುಕೊಂಡು ಬಡಿಯಲಾರಂಭಿಸಿದರು. ಸರಕಾರದ ಕಡೆಯಿಂದ ಬಂದವರು ಬದುಕಿದರೆ ಸಾಕೆಂದು ಪಲಾಯನ ಹೇಳುವಾಗ ಆಚೆ ಕಡೆಯಿಂದ ಎಂಎಲ್ಎ ಕಡೆಯ ಇನ್ನೊಂದು ಗ್ಯಾಂಗು ಬೀದಿಗೆ ನುಗ್ಗಿತು. ಅವರ ಕೈಗಳಲ್ಲಿ ಉರಿಯುತ್ತಿರುವ ದೊಂದಿಗಳಿದ್ದವು. ಪೌರತ್ವ ತಿದ್ದುಪಡಿ